ಬೀದರ್ ಜಿಲ್ಲೆಯ ಬ್ಯಾರೇಜ್‌ಗಳ ಬಗ್ಗೆ

ಶ್ರೀ ಅರವಿಂದ ಕುಮಾರ್ ಅರÀಳಿ (ವಿಧಾನಸಭೆಯಿಂದ ಚುನಾಯಿತರಾದವರು) -

23 (235) ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕøತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಬೀದರ್ ಜಿಲ್ಲೆಯ ಚೆಂದಾಪುರ, ಜಿರಗ್ಯಾಳ, ಮಾಣಿಕೇಶ್ವರ ಹಾಲಹಳ್ಳಿ, ಬ್ರಿಡ್ಜ್ ಕಂ ಬ್ಯಾರೇಜ್‌ನ ಗೇಟು ಹಾಳಾಗಿರುವುದು ನಿಜವೇ ; ಈ ಬ್ಯಾರೇಜುಗಳಿಗೆ ಅಳವಡಿಸಲಾಗಿರುವ ಗೋಡಬೋಲೆ ಗೇಟುಗಳಲ್ಲಿ ದೋಷ ಕಂಡು ಬಂದಿದೆಯೇ; ಇದ್ದಲ್ಲಿ, ಸಂಬಂಧಿಸಿದ ಗುತ್ತಿಗೆದಾರರ ಮತ್ತು ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಆ) ಗೋದಾವರಿ ಜಲಾನಯನದಲ್ಲಿ ಬೀದರ್ ಜಿಲ್ಲೆಗೆ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು ; ಹಂಚಿಕೆಯಾದ ನೀರು ಬಳಕೆಗೆ ಯಾವ ಯಾವ ಯೋಜನೆಗಳನ್ನು ನಿರ್ಮಿಸಲಾಗಿದೆ ; ಸಂಪೂರ್ಣ ನೀರು ಬಳಕೆಗೆ ಈಗಿರುವ ಯೋಜನೆಗಳು ಸಮರ್ಪಕವೇ ; ಅಥವಾ ಹೊಸ ಯೋಜನೆಗಳನ್ನು ರೂಪಿಸಬೇಕೆ ; ಹಾಗಿದ್ದಲ್ಲಿ, ಸರ್ಕಾರದ ಮುಂದಿರುವ ಕ್ರಮಗಳೇನು ?